


ಇವೆಲ್ಲ ನನ್ನನ್ನು ಸಂತೈಸಲು ಹೇಳುವ ಮಾತುಗಳಂತೆ ಕಾಣುತ್ತವೆ. ಆದರೆ, ಆ ಸನ್ಯಾಸಿಯನ್ನು ನೋಡಿದರೆ ಸಾಮಾನ್ಯ ಮನುಷ್ಯರಂತೆ ಕಾಣುತ್ತಿಲ್ಲ... ಅತಿ ಬುದ್ಧಿವಂತರಂತೆ ಕಾಣುತ್ತಾರೆ... ಹೇಗೊ ಉತ್ತರಗಳೊಂದಿಗೆ ಅವರು ನಾಳೆ ಬಂದುಬಿಡುತ್ತಾರೆ ಎಂದೇ ನನ್ನ ಅಂತರಾತ್ಮ ಹೇಳುತ್ತಿದೆ..."

ಮಂಡನ ಮಿಶ್ರ ಸ್ವಲ್ಪ ಸಮಯ ಶಾಂತವಾಗಿದ್ದರು. "ಅವರು ಸನ್ಯಾಸಿ. ಅವರಿಂದ ನೀನು ಕೇಳಿದ ವಿಷಯಗಳನ್ನು ಹೇಗೆ ಅನುಭವಪೂರ್ವಕವಾಗಿ ತಿಳಿದುಕೊಂಡು ಬರಲು ಸಾಧ್ಯ?" ಎಂದವರು ಸ್ವಲ್ಪ ಹಿಂಜರಿಯುತ್ತಾ, "ಆದರೆ, ಸರಸಾ... ನೀನು ಒಬ್ಬ ಸನ್ಯಾಸಿಯ ಬಳಿ ಅಂತಹ ಧರ್ಮ ಸಂಕಟವಾದ ಪ್ರಶ್ನೆಗಳನ್ನು ಕೇಳಿದ್ದು ಸರಿಯಲ್ಲ ಎಂದೇ ನನಗೆ ಅನಿಸುತ್ತದೆ..." ಎಂದರು.

ಸರಸವಾಣಿ ಈಗ ಅವರಿಗೆ ಬೆನ್ನು ತೋರಿಸಿ ಮಲಗಿಕೊಂಡಳು. "ಆ ಸನ್ಯಾಸಿಯೇ ಅದನ್ನು ಧರ್ಮ ಸಂಕಟ ಅಂದುಕೊಳ್ಳಲಿಲ್ಲ. ನಿಮಗೇನು ಸಮಸ್ಯೆ?" ಎಂದು ಕೇಳಿದಳು. "ನಾನು ಯತಿ... ನನ್ನ ಪರಿಮಿತಿಯಲ್ಲಿ ಬಾರದ ವಿಷಯಗಳನ್ನು ನೀನು ವಾದಕ್ಕೆ ತರುವುದು ಸರಿಯಲ್ಲ ಎಂದು ಯಾಕೆ ಅವರು ಹೇಳಲಿಲ್ಲ? 'ಒಂದು ತಿಂಗಳು ಅವಕಾಶ ಕೊಡಿ, ಅನುಭವ ಜ್ಞಾನದಿಂದ ನಾನು